‘ಹಡೆದ ನಂತರ ಮಗುವನ್ನು ನೋಡಬಹುದೇ?’ ಕಾತರದಿಂದ ಕೇಳಿದಳು ಬಾಲಮಣಿ.

‘ಅದೇ, ಮೊದಲೇ ಡಾಕ್ಟರಮ್ಮ ಹೇಳಿದ್ದಾರಲ್ಲ. ಕೂಸನ್ನು ನೋಡುವಂತಿಲ್ಲ ಮತ್ತೇಕೆ ಕಿರಿಕಿರಿ?’ ಎಂದು ಅಸಹನೆಯಿಂದ ನುಡಿದ ಆ ಡಾಕ್ಟರ್.

‘ಹೇಳಿದ್ದಾರೆ ಆಗಲೀ, ಒಂದೇ ಒಂದು ಸಲ ನೋಡಬಹುದೇನೊ ಎಂದು ಕೇಳಿದೆ’ ಎಂದು ಆತನ ಅಸಹನೆಯನ್ನು ಲೆಕ್ಕಿಸದೇ ನುಡಿದಳು ಬಾಲಮಣಿ.

‘ಏನೇನೋ ಮಾತಾಡಿ ನನಗೆ ತೊಂದರೆ ಕೊಡಬೇಡ ಮಾತಾಯಿ! ಹೊಟ್ಟೆ ತುಂಬಾ ಉಂಡು ಮಲಗು. ನಾಳೆ ಬರ್‍ತೇನೆ. ಇರಾನ್‌ನವರು ಬೆಳಗಿನ ಜಾವ ಮೂರು ಗಂಟೆಗೇ ಬರ್‍ತಾರಂತೆ’ ಎಂದು ಹೇಳುತ್ತಾ ಆತ ಎದ್ದು ಹೋದ.

ಬಾಲಮಣಿ ಚಿಂತೆಗೀಡಾದಳು. ಗರ್ಭದಲ್ಲಿ ಕೂಸು ಕದಲುತ್ತಿತ್ತು. ಆ ಚಲನೆಯಿಂದ ಸತ್ತು ಹೋದ ಮಗನ ನೆನಪಾಗುತ್ತಿತ್ತು. ತನ್ನ ಮಗುವಿನ ಬಸುರಿಯಾದಾಗ ಗಂಜಿ ನೀರಿಗೂ ಗತಿಯಿರಲಿಲ್ಲ. ಧಗಧಗ ಬಿಸಿಲಿನಲ್ಲಿ ಹೊಲದ ಕೆಲಸದಲ್ಲಿ ಕುಸ್ತಿ ಹಿಡಿಯಬೇಕಾಗಿತ್ತು. ಆದರೆ ಈ ಪರರ ಮಗುವಿನ ಗರ್ಭಕಾಲದಲ್ಲಿ ಎಲ್ಲಿಲ್ಲದ ಸುಖ ದೊರೆಯಿತು. ತಣ್ಣನೆಯ ಕೋಣೆ. ದಾಹ ಶಮನಕ್ಕೆ ಹಣ್ಣಿನ ರಸಗಳು. ಸಮಯಕ್ಕೆ ಸರಿಯಾಗಿ ರುಚಿ ರುಚಿಯಾದ ಊಟ. ಜೀರ್ಣಿಸಿಕೊಳ್ಳೋದೇ ಕಷ್ಟ. ಕಾಲು ಕೆಳಗಿಡದಂತೆ ನರ್ಸ್ ನೋಡಿಕೊಳ್ಳುತ್ತಾರೆ ಅಂತವರಿಗೆ ಮಕ್ಕಳಾಗಿ ಜನಿಸುವುದರಲ್ಲಿ, ಮಕ್ಕಳನ್ನು ಹೆತ್ತುಕೊಡುವುದೂ ಅದೃಷ್ಟವೇ ಎಂದು ಸಾವಿರ ಸಲ ಅಂದುಕೊಂಡಳು.

ಮರಚಲು ಮಗ ತನ್ನ ಗರ್ಭದಲ್ಲಿ ಆಕೆಯ ಮನಸ್ಸು ಎಲ್ಲಾ ಬಂಧನಗಳಿಂದ ಮುಕ್ತವಾಗಿ ರೋದಿಸುತ್ತಿದೆ. ತಾನೀಗ ಹೊರುತ್ತಿರುವ ಗರ್ಭಸ್ಥ ಕೂಸು ನಿಜವಾಗಿ ತನ್ನದೇನಾ? ಗತಿಸಿದ ಮಗ ಮತ್ತೊಮ್ಮೆ ಈಗ ತನ್ನೊಳಗೆ ಸೇರಿದ್ದಾನೇನೋ? ಎಂದು ಭ್ರಮಿಸುತ್ತಿದ್ದಾಳೆ. ಆವರೆಗೆ ಸಣ್ಣ ಸಣ್ಣ ಕಾಲುಗಳಿಂದ ತಾಯಿಯನ್ನು ಒದೆದು ಆಕೆಯ ಗತಿಸಿದ ಮಗುವಿನ ನೆನಪು ಮಾಡುತ್ತಿದ್ದ ಆ ಶಿಶುವಿನ ಚಲನೆಗಳು ನಿಧಾನವಾಗಿ ನಿಂತವು. ಹೊಟ್ಟೆಯಲ್ಲಿ ಒಂದು ಮೂಲೆಗೆ ತಿರುಗಿ ವಿಶ್ರಾಂತಿ ತೆಗೆದುಕೊಳ್ಳಲು ಮಲಗಿದಂತಿತ್ತು ಮಗು. ಮತ್ತೊಮ್ಮೆ ಬಾಲಮಣಿ ವರ್ತಮಾನಕ್ಕೆ ಬಂದಳು. ವಾಸ್ತವ ಸಂಗತಿಗಳು ಕಳವಳಕಾರಕವಾಗಿದ್ದವು. ಸಾಲಗಳು, ಅತ್ತೆಯ ಮನೆಯಲ್ಲಿ ತನ್ನ ಒಂಟಿತನ ಎಲ್ಲ ನೆನಪಾಗಿ ಹೆದರ ತೊಡಗಿದಳು. ಹೆರಿಗೆಯಾದೊಡನೆ ದುಡ್ಡು ತಗೊಂಡು ಹೋಗಿ ಸಾಹುಕಾರನಿಗೆ ಕೊಟ್ಟು ಉಳಿದದ್ದನ್ನು ದುಡಿದು ತೀರಿಸುವೆನೆಂದು ಸಮಾಧಾನ ಮಾಡಬೇಕು ಎಂದು ಮುಂದಿನ ಬದುಕಿನ ಯೋಜನೆ ಹಾಕ ತೊಡಗಿದಳು. ಹೀಗೆ ಆಲೋಚನಾ ತರಂಗದಲ್ಲಿರುವಾಗ ಇದ್ದಕ್ಕಿದ್ದಂತೆ ಸೊಂಟ ನೋವು ಸುರುವಾದವು. ದಿಂಬಿಗೆ ಆನಿಕೊಂಡು ಕೂತವಳು ಹಾಗೇ ಒರಗಿದಳು.

ಅರ್ಧರಾತ್ರಿ ಮೀರಿದರೂ ಬಾಲಮಣಿಗೆ ನಿದ್ದೆ ಬರಲಿಲ್ಲ. ಸೊಂಟ ನೋವು ಹೆಚ್ಚಾಗುತ್ತಿತ್ತು. ಗರ್ಭದಲ್ಲಿ ಮಗುವು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಹೊಟ್ಟೆಯನ್ನು ಒದ್ದು ಹೊರಗೆ ಬರಲು ಪ್ರಯತ್ನಿಸುತ್ತಿತ್ತು.

ಇದು ಪ್ರಸವ ವೇದನೆ. ನರ್ಸನ್ನು ಕರೆಯಬೇಕು ಎಂದಾಗ ಪಕ್ಕದಲ್ಲಿ ಕುರ್ಚಿಯಲ್ಲಿ ಕೂತು ತೂಕಡಿಸುತ್ತಿದ್ದ ನರ್ಸ್ ತಟಕ್ಕನೆ ಎದ್ದು ನೋಡಿದಳು. ಕೋಣೆಯ ಬಾಗಿಲಲ್ಲಿ ವಿಲವಿಲ ಒದ್ದಾಡುತ್ತಿರುವ ಬಾಲಮಣಿ ಕಂಡಳು. ‘ಡಾಕ್ಟ್ರಮ್ಮನ್ನನ್ನು ಕರೆಯೋದಿಲ್ಲವಾ? ವಿಪರೀತ ನೋವು’ ಎಂದು ಬಾಲಮಣಿ ಸೀರೆಯ ಸೆರಗಿನಿಂದ ಕೊರಳಿನಲ್ಲಿ ಸುರಿಯುತ್ತಿದ್ದ ಬೆವರು ಒರೆಸಿಕೊಂಡಳು. ನರ್ಸ್ ‘ಕರೆಯುತ್ತೇನೆ’ ಎಂದು ಅಡಾವುಡಿಯಲ್ಲಿ ಓಡಿದಳು ಪ್ರಸವ ಕೊಠಡಿಯಲ್ಲಿ ಬಾಲಮಣಿ ವಿಪರೀತ ನೋವಿನಿಂದ ಒದ್ದಾಡುತ್ತಿದ್ದಾಳೆ.

ಮೌತ್‌ಮಾಸ್ಕ್ ಕಟ್ಟಿಕೊಂಡ ಡಾ. ಮಾಧವಿ ತನ್ನ ಏಪ್ರನ್‌ಗೆ ನರ್ಸ್‌ನಿಂದ ಲಾಡಿ ಕಟ್ಟಿಸಿಕೊಳ್ಳುತ್ತಾ, ಇನ್ನೊಂದು ಕಡೆ ಟ್ರೇನಲ್ಲಿರುವ ಗ್ಲೌಸ್ ಹಾಕಿಕೊಳ್ಳುತ್ತಾ ಇರುವಾಗ ಕೋಣೆಗೆ ಬಂದವರು ಆಕೆಯ ಪತಿ ಡಾ. ಅರುಣ್. ‘ಮಾಧವೀ ನಾರ್ಮಲ್ ಡೆಲಿವರಿಗೆಂದು ರಿಸ್ಕ್ ತಗೋತಿದ್ದೀಯಾ ಇನ್ನೊಮ್ಮೆ ಯೋಚಿಸು’ ಎಂದು ಎಚ್ಚರಿಸಿದ. ‘ಈಗ ಸಮಯವಿಲ್ಲ ಅರುಣ್, ತುಂಬಾ ನೋವು ಬರುತ್ತಿವೆ. ಲೆಟ್ ಮಿ ಡು ಇಟ್! ಎಲ್ಲಾ ದೇವರ ಮೇಲೆ ಭಾರ’ ಎಂದು ಪ್ರಸವ ಕೊಠಡಿಗೆ ನಡೆದಳು ಮಾಧವಿ.

ಮಾಧವಿ ಒಳಹೋದ ಎರಡೇ ನಿಮಿಷಗಳಿಗೆ. ‘ಕೇರ್’ ಎಂಬ ಹಸುಗೂಸಿನ ಆಕ್ರಂದನ ಹೊರಗಿದ್ದ ಡಾ. ಅರುಣ್‌ಗೆ ಕೇಳಿಸಿತು. ಆದರೂ ಆತನಲ್ಲಿ ಟೆನ್ಷನ್. ಮಗುವಿಗೆ ಏನಾದರೂ ಆದರೆ ಎಲ್ಲಾ ಪ್ರಯತ್ನ ಉಸುಕಿನಲ್ಲಿ ನೀರು ಹಾಕಿದಂತೆಯೇ ಎನಿಸಿತ್ತು. ಎಲ್ಲಾ ಸುರಕ್ಷಿತ ನೆರವೇರುವಂತೆ ಮಾಡು ದೇವಾ... ಎಂದು ಮನಸ್ಸಿನಲ್ಲಿ ಮೊರೆಯಿಟ್ಟ. ಇಪ್ಪತ್ತು ನಿಮಿಷಗಳಿಗೆ ಹೊರಬಂದ ಮಾಧವಿ ‘ಗಂಡು’ ಎಂದಳು ಸಂಸತದಿಂದ! ‘ವೇಯಿಟ್ ಎಷ್ಟು? ಆರೋಗ್ಯವಂತ ಮಗು ತಾನೇ?’ ಎಂದು ಆತಂಕದಿಂದ ನುಡಿದ ಅರುಣ್. ನಾಲ್ಕು ಕೇಜ್‌ಗಳು. ಎಲ್ಲಾ ನಾರ್ಮಲ್ ಎಂದು ಭರವಸೆಯಿಂದ ಹೇಳುತ್ತಾ ಟೈಮ್ ನೋಡಿದಳು ಮಾಧವಿ. ಬೆಳಗಿನ ಜಾವ ಮೂರು ಗಂಟೆ ನಲವತ್ತೈದು ನಿಮಿಷ ಎಂದು ಗಡಿಯಾರ ತೋರಿಸಿದಳು. ‘ಈ ಹೊತ್ತಿಗೆ ಅವರು ಲ್ಯಾಂಡ್ ಆಗಿರ್ತಾರೆ. ಫಾರ್ಮಾಲಿಟೀಸ್ ಕೂಡಾ ಮುಗಿದಿರಬೇಕು. ಇನ್ನೊಂದು ಗಂಟೆಯಲ್ಲಿ ಅವರಿಲ್ಲಿ ಇರ್ತಾರೆ ಎಂದುಕೊಳ್ತೇನೆ’ ಎಂದಳು ಮಾಧವಿ.

‘ಹೌದು, ಬರೋದ್ರಲ್ಲಿ ಗುಡ್ ನ್ಯೂಸ್ ರೆಡಿ ಇರ್ತದೆ. ಅವರು ಸಂತೋಷ ಪಡ್ತಾರೆ. ಬಾಲಮಣಿ ಮೈಯೆಲ್ಲಾ ಹಸಿ ಹುಣ್ಣಿನಂತೆ ಆಗಿದೆ.

ಮಗುವನ್ನು ಹೆತ್ತು ಇಪ್ಪತ್ನಾಲ್ಕು ಗಂಟೆಗಳಾಗಿವೆ. ಮಂಚದ ಮೇಲೆ ಬಲಗಡೆಗೆ ಇಪ್ಪತ್ತಾರು ಸಲ ನೋಡಿಕೊಂಡಳು. ಮಗುವಿನ ಮೆತ್ತನೆಯ ಸ್ಪರ್ಶ ಸಿಗುತ್ತೇನೋ ಎಂದು ಕಾತರಿಸಿದಳು. ಹೆರಿಗೆ ಆಗುವಾಗ ಅಳುದನಿ ಕೇಳಿ ಒಂದು ಸಲ ತಲೆಯೆತ್ತಿ ನೋಡಿದಳು. ಕಪ್ಪು ಕೂದಲಿನ ತಲೆಯ ಮಾವಿನ ಹಣ್ಣಿನಂತಹ ಮಗುವು ಕ್ಷಣಕಾಲ ಕಂಡಿತಷ್ಟೆ. ಕೂಡಲೇ ಡಾಕ್ಟರ್ ಗದರಿಸಿದ ಕಾರಣ ತಲೆ ತಗ್ಗಿಸಬೇಕಾಯಿತು. ಬಾಲಮಣಿಗೆ ಕೂಸು ಕಣ್ಣಿಗೆ ಕಟ್ಟಿದಂತಿದೆ. ಆ ಕೂಸನ್ನು ಎತ್ತಿ ಮನಸಾರೆ ಮುದ್ದಾಡಬೇಕೆಂಬ ಆಸೆ. ಅದು ತನ್ನ ಮಗುವಲ್ಲ ಎಂದು ಗೊತ್ತು ಆದರೂ ಎಳೆಯುತ್ತಿದೆ. ಅಷ್ಟರಲ್ಲಿ ಆರ್.ಎಂ.ಪಿ. ಡಾಕ್ಟ್ರು ನೆನಪಾದರು. ಬೆಳಿಗ್ಗೆ ಬರ್‍ತೇನೆಂದಾತ ಎರಡು ದಿನವಾದರೂ ಮುಖ ತೋರಿಸಲಿಲ್ಲ ಎಂದುಕೊಂಡಳು. ಅಷ್ಟರಲ್ಲಿ ನರ್ಸ್ ಯಾವುದೋ ಇಂಜೆಕ್ಷನ್ ತಂದಳು. ಬಾಲಮಣಿ ಆಕೆಯನ್ನು ‘ನನಗೆ ಹುಟ್ಟಿದ್ದು ಗಂಡೋ? ಹೆಣ್ಣೋ?’ ಎಂದು ಕೇಳಿದಳು. ನರ್ಸ್ ಇಂಜೆಕ್ಷನ್ ಕೊಡುತ್ತಾ ‘ಗಂಡು’ ಎಂದಳು. ಬಾಲಮಣಿಯ ಜೀವ ನಿಟ್ಟುಸಿರು ಹಾಕಿತು. ಮೂರು ದಿನಗಳಾದವು ಬಾಲಮಣಿಯ ಮೊಲೆಗಳು ಹಾಲು ತುಂಬಿ ಭಾರವಾದವು. ಜ್ವರ ಬಂದಂತಾಗಿ ಮೈಯೆಲ್ಲಾ ವಿಪರೀತ ನೋವು. ಭರಿಸಲಾಗದ ತೀವ್ರ ನೋವು. ಡಾಕ್ಟರು ಮತ್ತು ಡಾಕ್ಟರಮ್ಮ ಏನೋ ಗೊಂದಲದಲ್ಲಿದ್ದಾರೆಂದು ತಿಳಿಯಿತು. ತಾನು ಪ್ರಸವಿಸಿದ ಲಾಗಾಯ್ತು ಅವರದು ಹಡಾವುಡಿ ಪರಿಸ್ಥಿತಿ ಆಗಿರೋದು ಆಕೆಗೆ ಗೊತ್ತಿಲ್ಲ. ಏನಾಯಿತೋ ಎಂದು ಯೋಚಿಸುತ್ತಿರುವಾಗ ಆಕೆಯ ಕೋಣೆಗೆ ಬಂದವರು ಆರ್.ಎಂ.ಪಿ. ಡಾಕ್ಟರ್ ‘ಮಗ ಹುಟ್ಟಿದನಂತೆ!’ ಎಂದರು. ಬಾಲಮಣಿ ಉದ್ವಿಗ್ನವಾಗಿ ‘ಹೌದು’ ಎಂದಳು.

‘ನಾಳೆ ನಿನ್ನನ್ನು ಡಿಸ್‌ಚಾರ್ಜ್ ಮಾಡ್ತಾರಂತೆ ಎಂದ. ‘ಈ ಮೂರು ದಿನಗಳಿಂದ ನಿನ್ನ ಸುಳಿವೇ ಇಲ್ಲ. ನನ್ನ ಕೂಸನ್ನು ನೀನೇನಾದರೂ ನೋಡಿದೆಯಾ?’ ಎಂದಳು ಬಾಲಮಣಿ ‘ನೋಡಿಲ್ಲ’ ಎಂದು ಅಸಡ್ಡೆಯಿಂದ ಉತ್ತರಿಸಿ ‘ಆ ಮಗು ಇನ್ನು ಇದೇ ಆಸ್ಪತ್ರೆಯಲ್ಲಿದೆ. ಅವನ ತಂದೆ, ತಾಯಿ ಅವನನ್ನು ಒಯ್ಯಲಿಲ್ಲ’ ಎಂದ.

‘ಯಾಕೆ? ಕೂಸಿಗೆ ಅನಾರೋಗ್ಯವೆ?’ ಎಂದು ಕಂಗಾಲಾಗಿ ಕೇಳಿದಳು ಬಾಲಮಣಿ. ‘ಇಲ್ಲ, ಚೆನ್ನಾಗಿದ್ದಾನೆ ಆದರೆ’ ಎಂದು ನಿಲ್ಲಿಸಿದನು. ಆದರೆ ಏನಾಯ್ತು ಹೇಳು’ ಎಂದಳು ಬಾಲಮಣಿ. ‘ಆ ಕೂಸಿನ ತಂದೆ–ತಾಯಿ ತೀರಿಕೊಂಡರು’ ಎಂದ ‘ಅಯ್ಯೋ! ಅದು ಹೇಗೆ? ಆ ದಿವಸ ನಸುಕಿನಲ್ಲೇ ಬರ್ತಾರೆಂದು ಹೇಳಿದೆಯಲ್ಲಾ?’ ಎಂದಳು. ‘ಅದೇ ಆ ದಿನ ಏರ್‌ಪೋರ್ಟ್‌ನಿಂದ ಬರುವಾಗ ಕಾರು ಸೇತುವೆಗೆ ಅಪ್ಪಳಿಸಿ ಅಪಘಾತ ಆಯಿತು. ಮಗುವಿನ ತಾಯಿ ಸ್ಥಳದಲ್ಲೇ ಮೃತಳಾದಳು. ತಂದೆ ಅಂಬುಲೆನ್ಸ್‌ನಲ್ಲಿ ತೀರಿಕೊಂಡರು. ಕಾರ್ ಡ್ರೈವರ್ ಕೂಡಾ ಸತ್ತ’ ಎಂದು ಭಯದಿಂದ ನುಡಿದ.

‘ಮತ್ತೆ ಕೂಸಿನ ಗತಿ?’ ಗಾಬರಿಯಿಂದ ಕೇಳಿದಳು ‘ಮಗುವಿನ ಸಂಗತಿ ಅನಂತರ. ನಿನಗೆ ಬರಬೇಕಾದ ಉಳಿದ ಹಣದ ಗತಿಯೇನು? ಈಗ ಆತನ ದನಿಯಲ್ಲಿ ಗಾಬರಿ ‘ದುಡ್ಡು’ ಎಂದು ಆಕೆ ನಿಲ್ಲಿಸಿದಳು. ‘ಆದರೆ ಕೂಸು ಇನ್ನೂ ಇಲ್ಲೇ ಇದೆಯಾ?’ ‘ಅವರ ಪೈಕಿ ಬೇರೆ ಯಾರಾದರೂ ಮಗುವನ್ನು ಒಯ್ಯಲಿಲ್ಲವೇ?’ ಎಂದವಳ ಪ್ರಶ್ನೆಯಲ್ಲಿ ಸುಪ್ತವಾದ ಆಸೆ. ‘ಯಾರೂ ಬರಲಿಲ್ಲ ಇಲ್ಲಿಯ ಅವರ ಗೆಳೆಯರು ಪೋಸ್ಟ್‌ಮಾರ್ಟಂ ಆದ ಶವಗಳನ್ನು ಅವರ ದೇಶಕ್ಕೆ ಕಳಿಸಿದ್ದಾರೆ. ಮಗು ಜನಿಸಿದ ವಿಷಯವನ್ನು ಅವರ ಜನರಿಗೆ ತಿಳಿಸಿದರೆ ಉತ್ತರವಿಲ್ಲವಂತೆ. ಅದಕ್ಕೇ ಏನು ಮಾಡೋದು ಅಂತ ಡಾಕ್ಟರು ಚಿಂತೆಗೀಡಾಗಿದ್ದಾರೆ. ಬಾಲಮಣಿಯಲ್ಲಿ ಹೊಸ ಆಸೆ ಚಿಗುರೊಡೆಯಿತು. ಆಗ ಆರ್ಥಿಕ ಸ್ಥಿತಿ ಮನೆಯ ಪರಿಸ್ಥಿತಿ ಎಲ್ಲಾ ನೆನಪಾಗಿ ಮಾಯವಾದವು.

ಡಾ. ಮಾಧವಿ ‘ಬಾಲಮಣಿ’ ಇನ್ನೊಂದು ತಿಂಗಳ ನಂತರ ಬಂದು ಚೆಕಪ್